**ಓ ಎಸ್ ನಂ. 99/2023 ಡಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 27.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ಪೂರ್ವಕ್ಕೆಃ ನಿಂಗಮ್ಮ ಕೋಂ ದಾಸಯ್ಯರವರ ಜಮೀನು, ಪಶ್ಚಿಮಕ್ಕೆಃ ಕೆ ಮಹಾದೇವಿರವರ ಜಮೀನು, ಉತ್ತರಕ್ಕೆಃ ರಸ್ತೆ ಮತ್ತು ದಕ್ಷಿಣಕ್ಕೆಃ ಸರ್ಕಾರಿ ಗೋಮಾಳ ಈ ಚಕ್ಕುಬಂದಿಯಲ್ಲಿ ಇರುವ ಸ್ವತ್ತನ್ನು ನಾನು ನೋಡಿಲ್ಲ. ಈ ಸ್ವತ್ತು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಈ ಚಕ್ಕುಬಂದಿಗಳ ಒಳಗಿನ ಸ್ವತ್ತಿನಲ್ಲಿ ವಾದಿ ಸ್ವಾಮೀಗೌಡ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿಯೊಳಗಿನ ಸ್ವತ್ತಿನಲ್ಲಿ ವಾದಿಯು 1997 ರ ಪೂರ್ವದಿಂದಲೂ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಚಕ್ಕುಬಂದಿಯು ಅನುವಾಳು ಗ್ರಾಮದ ಸರ್ವೆ ನಂ. 79 ರಲ್ಲಿನ 4 ಎಕರೆ ಜಮೀನಿಗೆ ಸೇರಿದ ಚಕ್ಕುಬಂದಿ ಎಂದರೆ ಗೊತ್ತಿಲ್ಲ. ಈ ಮೇಲೆ ಹೇಳಿದ ಜಮೀನನ್ನು ವಾದಿ ಸ್ವಾಮೀಗೌಡರಿಗೆ ಮಂಜೂರು ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಯು ನಿಶಾನೆ ಪಿ 1 ಆಗಿದೆ ಎಂದರೆ ಅದು ಸೃಷ್ಟಿತ ದಾಖಲೆ. ನಿಶಾನೆ ಪಿ 2 ರಲ್ಲಿರುವ ಸ್ಕೆಚ್ ನ್ನು ಸಹ ತಹಶೀಲ್ದಾರ್ ರವರು ನೀಡಿದ್ದಾರೆ ಎಂದರೆ ಅದು ಸಹ ಸೃಷ್ಟಿತ ದಾಖಲೆ. ವಾದಿಯು ಹಾಜರುಪಡಿಸಿರುವ ಆರ್ ಟಿ ಸಿ, ಎಂ ಆರ್ ಮತ್ತು ಎಲ್ಲಾ ದಾಖಲಾತಿಗಳು ಭೂ ಮಂಜೂರಾತಿ ಆಧಾರದ ಮೇಲೆ ತಹಶೀಲ್ದಾರ್ ರವರು ನೀಡಿರುವ ದಾಖಲೆಗಳು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿಶಾನೆ ಪಿ 6 ರಿಂದ 8 ರಲ್ಲಿರುವ ಛಾಯಾಚಿತ್ರಗಳು ವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿರುವ ಬಗ್ಗೆ ಹಾಜರುಪಡಿಸಿರುವ ಛಾಯಾಚಿತ್ರಗಳು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿಶಾನೆ ಪಿ 1 ರಿಂದ 17 ರವರೆಗೆ ಹಾಜರುಪಡಿಸಿರುವ ದಾಖಲೆಗಳು ವಾದಿಯು ದಾವಾ ಆಸ್ತಿಯ ಮಾಲೀಕತ್ವ ಹಾಗೂ ಸ್ವಾಧೀನಾನುಭವ ಹೊಂದಿರುವುದಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲೆಗಳು ಎಂದರೆ ಅವು ಸತ್ಯವಲ್ಲ.

ಸರ್ಕಾರಿ ಕಚೇರಿಯ ದಾಖಲಾತಿಗಳನ್ನು ಡಿಜಲಿಟೀಕರಣಗೊಳಿಸುವ ಪ್ರಕ್ರಿಯೆಯನ್ನು ಸರ್ಕಾರ ನಡೆಸುತ್ತಿದೆ ಎಂದರೆ ಸರಿ. ಹಾಗೆಯೇ ಪಾಂಡವಪುರ ತಹಶೀಲ್ದಾರ್ ಕಚೇರಿಯ ದಾಖಲೆಗಳು ಸಹ ಡಿಜಿಟಲೀಕರಣ ಆಗಿದೆ ಎಂದರೆ ಇರಬಹುದು. ವಾದಿ ಸ್ವಾಮೀಗೌಡರ ಹೆಸರಿಗೆ ಭೂ ಮಂಜೂರಾತಿಯಾಗಿ ಅದರ ಆಧಾರದ ಮೇಲೆ ಅವರ ಹೆಸರಿನಲ್ಲಿ ನೀಡಿರುವ ಖಾತಾ, ಆರ್ ಟಿ ಸಿ, ಮ್ಯುಟೇಷನ್ ಇತ್ಯಾದಿ ಕಂದಾಯ ದಾಖಲೆಗಳು ತಹಶೀಲ್ದಾರ್ ಕಚೇರಿಯಲ್ಲಿ ಡಿಜಿಟಲೀಕರಣ ಆಗಿದೆ ಎಂದರೆ ಸರಿಯಲ್ಲ. ಹಾಗೆ ಡಿಜಿಟಲೀಕರಣ ಆಗಿರಬಹುದಾದ ದಾಖಲೆಗಳನ್ನು ಹಾಜರುಪಡಿಸಿದರೂ ಸಹ ನನ್ನ ತಕರಾರು ಇದೆ. ನನಗೆ ಹಾಗೂ ನನ್ನ ಇಲಾಖೆಯವರಿಗೆ ದಾವಾ ಆಸ್ತಿ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ 1997 ರ ಪೂರ್ವದಿಂದಲೂ ದಾವಾ ಆಸ್ತಿಯ ಮಾಲೀಕತ್ವ ಹಾಗೂ ಸ್ವಾಧೀನಾನುಭವ ಹೊಂದಿರುವ ವಾದಿಗೆ ನಾವು ಸುಖಾಸುಮ್ಮನೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿರುವ ಎಲ್ಲಾ ದಾಖಲೆಗಳನ್ನು ದಿನಾಂಕ 26.12.2025 ರಲ್ಲಿ ಪಾಂಡವಪುರ ತಹಶೀಲ್ದಾರರು ಡಿಜಿಟಲೀಕರಣ ಗೊಳಿಸಿ ನೀಡಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ಸರ್ಕಾರಿ ದಾಖಲೆಗಳು. ನಿಶಾನೆ ಡಿ 1 ರಲ್ಲಿನ ಪಹಣಿಯು ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಿಶಾನೆ ಡಿ 7 ರಲ್ಲಿರುವ ಹಿಂಬರವು ಸಹ ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಿಶಾನೆ ಡಿ 8 ರಲ್ಲಿರುವ ಪತ್ರವು ಸಹ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ 9 ರಿಂದ 15 ಮತ್ತು ನಿಶಾನೆ ಡಿ 17 ರಿಂದ 36 ಎ ರಲ್ಲಿರುವ ದಾಖಲೆಯ ಮೂಲ ಪ್ರತಿ ಪಾಂಡವಪುರ ವಲಯ ಅರಣ್ಯ ಅಧಿಕಾರಿ ಕಚೇರಿಯಲ್ಲಿ ಇದ್ದು ಅದರ ಪ್ರತಿಯನ್ನು ನಾಗಮಂಗಲ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ದೃಢೀಕರಿಸಿದ್ದಾರೆ. ಸಾಕ್ಷಿಯು ಮುಂದುವರಿದು ನಾಗಮಂಗಲ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ದಾಖಲೆಗಳ ಪ್ರತಿಯನ್ನು ದೃಢೀಕರಿಸುವ ಪ್ರಾಧಿಕಾರ ಆಗಿರುವುದರಿಂದ ಆ ದಾಖಲೆಗಳನ್ನು ಅವರಿಂದ ದೃಢೀಕರಿಸಲಾಗಿದೆ ಎಂದು

ಹೇಳುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪಾಂಡವಪುರ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿರುವ ದಾಖಲೆಯನ್ನು ದೃಢೀಕರಿಸುವ ಅಧಿಕಾರ ನಾಗಮಂಗಲ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಇಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ 16 ರಲ್ಲಿರುವ ಆರ್ ಟಿ ಸಿ ಯನ್ನು ಸರ್ಕಾರಿ ಜಮೀನು ಎಂದು ತೋರಿಸಲು ಹಾಜರುಪಡಿಸಿದ್ದೇನೆ. ನಿಶಾನೆ ಡಿ 16 ರಲ್ಲಿ ಅರಣ್ಯ ಇಲಾಖೆಯ ಹೆಸರು ಇಲ್ಲ ಎಂದರೆ ಸರಿ. ನಿಶಾನೆ ಡಿ 16 ರಲ್ಲಿರುವ ಆರ್ ಟಿ ಸಿ ಯಲ್ಲಿ ಗೋಮಾಳ, ಯಡಿಯೂರಯ್ಯ, ಜಯಲಕ್ಷ್ಮಿ, ನಾರಾಯಣಗೌಡ, ಶಿವಣ್ಣ ಮತ್ತು ಸರ್ಕಾರ ಎಂದು ನಮೂದಾಗಿದೆ ಎಂದರೆ ಸರಿ. ನಿಶಾನೆ ಡಿ 16 ರಲ್ಲಿರುವ ಆರ್ ಟಿ ಸಿ ಯಲ್ಲಿ ನಮೂದು ಆಗಿರುವ ಹೆಸರುಗಳಲ್ಲದೆ ಇನ್ನು ಉಳಿದ ಅರ್ಹ ಫಲಾನುಭವಿಗಳ ಹೆಸರಿನಲ್ಲಿ ಆರ್ ಟಿ ಸಿ ಇಂಡೀಕರಣ ಮಾಡಲು ಸರ್ಕಾರದ ಹಂತದಲ್ಲಿ ಪ್ರಕ್ರಿಯೆ ಜಾರಿಯಲ್ಲಿದೆ ಎಂದರೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ಮೇಲೆ ನಮ್ಮ ಇಲಾಖೆಗೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹ ವಾದಿಯ ಸ್ವಾಧೀನಾನುಭವಕ್ಕೆ ನಾವು ತೊಂದರೆ ನೀಡಿದ ಕಾರಣ ಅವರು ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ನಿಶಾನೆ ಡಿ 16 ನ್ನು ಹೊರತುಪಡಿಸಿ ಯಾವುದೇ ದಾಖಲೆಗಳು ಸಹ ಈ ದಾವಾ ಆಸ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**